ಪ್ಯಾರಾವನ್ನು ಅದಕ್ಕೆ ಬ್ಲರ್ಬ್‌ನಂತೆ ಬಳಸಿಕೊಳ್ಳಿ. ಕೆಳಗೆ ಪತ್ರಿಕಾಲಯದ ಅಡ್ರೆಸ್ ಹಾಕಿ ಓದುಗರಿಂದ ಕವನಗಳನ್ನು ಆಹ್ವಾನಿಸಿ.' ಬಂದ ಟೆಕ್ಸ್ಟ್ ಕನ್ವರ್ಟ್ ಮಾಡಿಕೊಂಡು ಹರಿದ್ವರ್ಣಾಳ ಇಲ್ಲಸ್ಟ್ರೇಷನ್ ಹಾಕಿ, ಡಿಸೈನ್ ಮಾಡಿ ಪಿಡಿಎಫ್ ಮಾಡಿ ಮೇಲ್ ಕಳಿಸಿದ. ಸಂಪಾದಕರಿಂದ 'ಫೆಂಟಾಸ್ಟಿಕ್'ಎಂಬ ರಿಪ್ಲೈ ಬರುವ ಹೊತ್ತಿಗೆ ಆಗಲೇ ಪೇಜ್ ಪ್ರೆಸ್‌ಗೆ ತಲುಪಿಯಾಗಿತ್ತು.

ಯಾವುದೋ ಮೂಡಿನಲ್ಲಿ ಮಾಡಿ ಕಳಿಸಿದ ಆ ಇಲ್ಲಸ್ಟ್ರೇಷನ್ ರಿಜೆಕ್ಟ್ ಆಗಿರುತ್ತದೆ ಅಥವಾ ಪಿಡಿಎಫ್ ಮುಗಿದಿರುತ್ತದೆ ಎಂದುಕೊಂಡು ಪೇಪರಿನ ಸಪ್ಲಿಮೆಂಟ್ ತೆರೆದು ನೋಡುವಲ್ಲಿ ಅಷ್ಟೇನು ಆಸಕ್ತಿ ತೋರದೆ ಮತ್ತೆ ವಾಪಸು ಬಂದು ಹಾಸಿಗೆಗೆ ಉರುಳಿದಳು ಹರಿದ್ವರ್ಣಾ. ಐದೈದು ನಿಮಿಷಕ್ಕೊಂದರಂತೆ ಫೋನ್ ಹೊಡೆದುಕೊಳ್ಳುವುದು, ಒಂದರ ಮೇಲೊಂದು ಮೆಸೇಜ್‌ಗಳ ಬೀಪ್ ಸದ್ದು ಕೇಳುವುದು ಎಲ್ಲವೂ ಕನಸಿನಲ್ಲಿ ನಡೆದಂತೆ ಆಗುತ್ತಿತ್ತು. ಸೆಕೆಂಡ್ ಶಿಫ್ಟ್ ಮುಗಿಸಿ ಬಂದ ಗಂಡ ಗಾಢನಿದ್ರೆಯಲ್ಲಿದ್ದ. ಕನಸೋ ಏನಿದು ಎಂದುಕೊಂಡು ಕಣ್ಣುಜ್ಜಿಕೊಂಡಳು. ಮೆಸೇಜ್ ಬಾಕ್ಸ್ ತುಂಬಿ ತುಳುಕುತ್ತಿತ್ತು. ಸುಮಾರು ಇಪ್ಪತ್ತು ನಂಬರುಗಳ ಮಿಸ್ಡ್ ಕಾಲುಗಳಿದ್ದವು. ಒಂದೊಂದೇ ಮೆಸೇಜ್ ಓದುತ್ತಾ ಹೋದಳು.

'ಇಪ್ಪತ್ತು ವರ್ಷಗಳಿಂದ ನಾಡಿನ ಸಂಸ್ಕೃತಿ ಘನತೆಯನ್ನು ಅಕ್ಷರಗಳಲ್ಲಿ ಹಿಡಿದಿಟ್ಟುಕೊಂಡು ಬಂದ ಪತ್ರಿಕೆ ಇಂದು ನಿಜಕ್ಕೂ ನಾಗರಿಕರು ತಲೆತಗ್ಗಿಸುವಂಥ ಕೆಲಸ ಮಾಡಿದೆ. ಅದು ನಿಮ್ಮಿಂದ, ನಿಮ್ಮ ಇಲ್ಲಸ್ಟ್ರೇಷನ್‌ನಿಂದ! ತಲೆಹಿಡುಕ ಸಂಪಾದಕರಿಗೂ, ಅಭಿವ್ಯಕ್ತಿ ಸ್ವಾತಂತ್ರ್ಯವೆಂದು ಕಿರುಚುವ ನಿಮ್ಮಂಥ ಕಲಾವಿದರಿಗೂ ಧಿಕ್ಕಾರ!'

ಎದ್ದು ಕುಳಿತಳು.

'ಆಕರ್ಷಕ ಅಂಗಸೌಷ್ಠವ ಹೊಂದಿದ್ದಲ್ಲಿ ಮಾತ್ರ ಆಕೆ ಜಗತ್‌ಸುಂದರಿ ಎಂಬ ಸೋ ಕಾಲ್ಡ್ ಸೌಂದರ್ಯವ್ಯಾಖ್ಯಾನುಕಾರರೆಲ್ಲಾ ನಿಮ್ಮ ಇಲ್ಲಸ್ಟ್ರೇಷನ್ ನೋಡಿ ಮತ್ತದಕ್ಕೆ ಕೊಟ್ಟ ತಲೆಬರಹ ನೋಡಿ ಕುಸಿದುಬೀಳೋದು ಗ್ಯಾರಂಟಿ. ವೆಲ್‌ಡನ್ ಮ್ಯಾಡಮ್.'

ಕೂದಲನ್ನು ಕಟ್ಟಿಕೊಂಡು ಗೋಡೆಗಾತು ಕುಳಿತಳು.

'ಛೀ ಏನಿದು ಅಸಹ್ಯ. ನೀವು ಒಂದು ಹೆಣ್ಣಾಗಿ ಒಳಗಿರುವುದನ್ನು ಒಳಗಿಡದೆ ಹೀಗೆ ಚಿತ್ರದಲ್ಲಿ ಬಿಚ್ಚಿಡುವುದೆ? ಸ್ವೇಚ್ಛೆಯ ಪರಾಕಾಷ್ಠೆ. ಅದಕ್ಕೆ ಈ ಕಲೆಯೆಂಬ ಹಣೆಪಟ್ಟಿ ಬೇರೆ! ಯಾವುದು ಎಲ್ಲಿರಬೇಕೋ ಅಲ್ಲಿದ್ದರೇ ಚೆಂದ. ಇದು ನಿಮ್ಮ ಕಲಾವಂತಿಕೆಗೆ ಅದರಲ್ಲೂ ಒಬ್ಬ ಹೆಣ್ಣಿಗೆ ಶೋಭೆ ತರುವುದಂಥದಲ್ಲ.'

'ಥ್ಯಾಂಕ್ಸ್ ಅ ಲಾಟ್ ಹರಿದ್ವರ್ಣಾ! ನಿಮ್ಮಂಥ ಕಲಾವಿದರು ನಮ್ಮ ಸಮಾಜಕ್ಕೆ ಬೇಕು. ನಮ್ಮ ಮೂಲಬೇರುಗಳನ್ನು ಹುಡುಕಿಕೊಡುವಂಥವರು ನಮಗೆ ಬೇಕು. ನಮ್ಮಲ್ಲಿ ಕಾಡಿನ ಪ್ರಜ್ಞೆ ಜಾಗೃತಗೊಳ್ಳಬೇಕು. ಈ ಜಾಹೀರಾತು ಪ್ರಪಂಚ ಮಾಡಿಟ್ಟ ಮಾಡುತ್ತಿರುವ ಅವಘಡಗಳಿಗೆ ಮೂಲಸೌಂದರ್ಯದ ಸೊಗಡನ್ನೇ ಮರೆಯುತ್ತಿದ್ದೇವೆ. ಇದು ಕೇವಲ ಒಂದು ಸಂಚಿಕೆಯ ಆಹ್ವಾನಿತ ಕವಿತೆಗಳಿಗೆ ಮೀಸಲಾಗದೆ, ಅಭಿಯಾನವಾಗಬೇಕು.'

ಲೈಟ್ ಆನ್ ಮಾಡಿ ಬಾಟಲಿಯಲ್ಲಿದ್ದ ನೀರು ಕುಡಿದಳು.

ಫೇಸ್‌ಬುಕ್, ಟ್ವಿಟರ್, ವಾಟ್ಸ್‌ಆ್ಯಪ್‌ಗಳ ಮೂಲಕ ಫ್ರೀಡಮ್, ಲಿಬರಲ್, ನ್ಯಾಚುರಲ್, ಬೀಯಿಂಗ್ ಅ ವುಮನ್ ಹೀಗೆ ಏನೇನೋ ಹ್ಯಾಷ್‌ಟ್ಯಾಗ್‌ಗಳಡಿ ಪರವಿರೋಧಗಳುಳ್ಳ ನೂರಾರು ಅಭಿಪ್ರಾಯಗಳು, ಚರ್ಚೆಗಳು ಅಪ್‌ಡೇಟ್ ಆಗುತ್ತಿವೆ ಎಂದರೆ ನಿನ್ನ ಕಲಾಪ್ರಜ್ಞೆಯನ್ನು ಮೆಚ್ಚುವಂಥದ್ದು ಎಂದು ಸ್ನೇಹಿತರು ಅಭಿನಂದನೆಯ ಮೆಸೇಜುಗಳನ್ನು ಕಳಿಸಿದ್ದರು.

ಟೌನ್‌ಹಾಲ್ ಮುಂದೆ, ಪ್ಲಕಾರ್ಡ್‌ಗಳನ್ನು ಹಿಡಿದು ಕುಳಿತ ಒಂದಿಪ್ಪತ್ತು ಜನರಿದ್ದ ಫೋಟೋ